ಹಾಸ್ಯ ಕತೆ ಓದುವಾಗ ನಮಗೆ ಗೋಚರಿಸುವುದಿಲ್ಲ. ಈ ಸಾಲು ಬೇರೆಯದೇ ಒಂದು ಭಾವವನ್ನು ಕತೆಯಲ್ಲಿ ಓದುಗನಿಗೆ ನೀಡಬಲ್ಲದು.

ತಮ್ಮ ಸೃಷ್ಟಿಯ ಪಾತ್ರಗಳನ್ನು ಈ ಕತೆಗಾರ ಅತೀ ಹತ್ತಿರದಿಂದ ಬಲ್ಲರು. ಆ ಪಾತ್ರಗಳನ್ನು ಹಾವಭಾವ ಸಮೇತ ಕಥೆಯ ಸಾಲುಗಳಲ್ಲಿ ಕಟ್ಟಿಹಾಕಬಲ್ಲರು. ಇದರಿಂದಾಗಿಯೇ ಕಥೆಯ ಪಾತ್ರದ ಸ್ಪಷ್ಟ ಚಿತ್ರಣವೊಂದು ಓದುಗನಿಗೆ ಸುಲಭವಾಗಿ ಸಿಕ್ಕಿಬಿಡುತ್ತದೆ. ಉದಾಹರಣೆಗೆ 'ಮಲಿನಾ' ಕತೆಯ ನಾಯಕಿ. ಓದನ್ನು ಅರ್ಧಕ್ಕೇ ಬಿಟ್ಟು, ಅಪ್ಪ ವಿಷ ಕುಡಿದು ಸತ್ತ ಹೊಲದಲ್ಲೇ ಕೃಷಿ ಮಾಡುತ್ತೇನೆ ಎಂದು ಟೊಂಕ ಕಟ್ಟಿ ನಿಲ್ಲುವ ಮಲಿನಾ ಇಷ್ಟವಾಗದೇ ಇರುವುದಿಲ್ಲ. ತನ್ನನ್ನು ಮದುವೆಯಾಗುತ್ತೇನೆಂದು ಬಂದ ಗಂಡುಗಳಿಗೆಲ್ಲ 'ನನಗಿಂತ ಮೊದಲು ತೆಂಗಿನಮರ ಹತ್ತಿ ತೋರ್ಸು ಬಾ' ಎಂದು ಕುಹಕವಾಡುವ ಊರಿನ 'ಲೇಡಿ ಪ್ರಬಾಕರ್' ಆಕೆ. ಸಂಭಾಷಣೆಗಳಲ್ಲಿ, ಘಟನೆಗಳಲ್ಲಿ ಆಕೆಯ ವ್ಯಕ್ತಿತ್ವವನ್ನು ಕತೆಗಾರ ಕಟ್ಟಿಕೊಡುವ ಪರಿ ಸೊಗಸಾಗಿದೆ. ಹಾಗೆ ನೋಡಿದರೆ, ಶಶಿ ತರೀಕೆರೆಯವರ ಕಥೆಗಳ ಮೂಲದ್ರವ್ಯವಿರುವುದೇ ಅವರ ಗಟ್ಟಿ ಪಾತ್ರಗಳ ನಿರ್ವಹಣೆಯಲ್ಲಿ. ಕತೆಯೊಂದನ್ನು 'ಕತೆಯಾಗಿಸುವ' ದರ್ದು ಅವರಲ್ಲಿ ಕಾಣುವುದಿಲ್ಲ. ಅವರು ಸೃಷ್ಟಿಸುವ ಪಾತ್ರಗಳ ವಿಶೇಷ ಗುಣ ಸ್ವಭಾವಗಳಲ್ಲಿ, ಅವರ ಸುತ್ತಣ ಸಣ್ಣ ಸಣ್ಣ ಸಂಗತಿಗಳ ವಿವರದಲ್ಲೇ ಕತೆಯನ್ನು ಕಾಣಿಸುವ ಪ್ರಯತ್ನ ಅವರದು. ಹೀಗಾಗಿ ಕತೆಯೊಂದು ತನ್ನೊಳಗೆ ಹಲವು ಕತೆಗಳನ್ನು ಹುದುಗಿಟ್ಟುಕೊಂಡಂತೆಯೂ, ಒಟ್ಟಾರೆಯಾಗಿ ಕತೆಯೊಂದರ ಸಿದ್ಧ ಸ್ವರೂಪದ ಹೊರಗುಳಿದಂತೆಯೂ ಏಕಕಾಲಕ್ಕೆ ಓದುಗನಿಗೆ ಗೋಚರಿಸಬಹುದು. ಕತೆಗಿಂತಲೂ ಕತೆ ಜರುಗಬಹುದಾದ 'ಪ್ರೋಸೆಸ್'ಗೆ ಅವರು ಹೆಚ್ಚಿನ ಮನ್ನಣೆಯನ್ನು ನೀಡುತ್ತಾರೆ.

'ಶುಗರ್ ಫ್ರೀ' ಎನ್ನುವ ಕತೆಯ ಊರಲ್ಲಿ ಜಂಬದ ಹೊಳೆ ಎನ್ನುವ ನದಿಯೊಂದಿದೆ. ಅದೊಂದು ಜಗತ್ಪ್ರಸಿದ್ಧ ನದಿಯೆಂದೂ ಅದರಲ್ಲಿ ಬಗ್ಗಿ ನೋಡಿದರೆ ನಾವು ಕಳಕೊಂಡ ಮುಖಗಳು ಕಾಣಸಿಗುತ್ತವೆ ಎಂಬುದು ಪ್ರತೀತಿ. ಹೀಗಾಗಿ ಆ ನದಿಯ ಸೇತುವೆಯ ಮೇಲೆ ಬಸ್ಸುಗಳು ಹಾದು ಹೋಗುವಾಗ ಕಿಟಕಿಯಿಂದ ಬಗ್ಗಿ ನೋಡುವ ಜನ ಅಳುವುದೂ ಖುಷಿ ಪಡುವುದೂ ಯಾವಾಗಲೂ ನಡೆಯುತ್ತದೆ. ಅದೇ ಬಸ್ಸಿನಲ್ಲಿ ಪ್ರಯಾಣಿಸುವ ಚಿತ್ರಕಲಾವಿದನೊಬ್ಬ ತಾನು ನದಿಯಲ್ಲಿ ಕಂಡ ಅಪರಿಚಿತ ಮಗುವನ್ನು ಪೇಂಟಿಂಗಿನಲ್ಲಿ ಚಿತ್ರಿಸಲು ಪ್ರಯತ್ನಿಸಿ ಸೋಲುತ್ತಾನೆ. ಈ ಇಡೀ ಘಟನೆಯೇ ಒಂದು ರೂಪಕವಾಗಿ ನಮ್ಮನ್ನು ಕಾಡುತ್ತದೆ. ಇದೇ ಕತೆಯಲ್ಲಿ, ಗಂಡನ ಕಣ್ಣು ಹೋದುದು ಹೆಣ್ಣು ದೆವ್ವದಿಂದ ಎಂದು ನಂಬಿರುವ ಟೇಲರ್ ಕತೀಜಾ ಇದ್ದಾಳೆ. ಕಣ್ಣು ಹೋಗಿದ್ದು ಶುಗರ್ ಹೆಚ್ಚಾಗಿ ಎಂದು ಸಾಬೀತುಪಡಿಸಲು ಹೆಣಗಾಡುವ ಡ್ರೈವರ್ ಫಾರೂಕನಿದ್ದಾನೆ. ಬಾರಿನಲ್ಲಿ ವಿಸ್ಕಿ ಹೀರುತ್ತ ಯುರೋಪಿನ ಸಾಹಿತಿಗಳ ಕತೆ ಹೇಳುವ ನಾಕಾಣೆ ರಮೇಶ, ಕಾಫ್ಕಾ ಎಂಬ ತನ್ನ ಹೆಸರಿನ ಹಿಂದುಮುಂದುಗಳೇ ಗೊತ್ತಿಲ್ಲದ ಆತನ ಗೆಳೆಯ... ಇವರೆಲ್ಲಾ ಬಿಡಿ ಚಿತ್ರಗಳಾಗಿ ನಮ್ಮ ಮನವನ್ನು ಕಲಕಿಬಿಡುತ್ತಾರೆ. ಹಾಗೇ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇವರನ್ನೆಲ್ಲ ಒಂದು ಅಗೋಚರ ತಂತುವಿನಿಂದ ಬೆಸೆದು 'ಕತೆಯ ಫ್ರೇಮ್ ವರ್ಕ್'ನಲ್ಲಿ ಬಂಧಿಸಿದ್ದರೆ ಅನನ್ಯವಾದ ಮಜಲೊಂದು ದಕ್ಕುತ್ತಿತ್ತು. ಶಶಿ ತರೀಕೆರೆಯವರ ಮಾತಿನಲ್ಲೇ ಹೇಳಬೇಕೆಂದರೆ – 'ಮಂದಗಮನೆಯಂತೆ ಆಳದ ಸಿಹಿಯನ್ನೆಲ್ಲಾ ಹೊತ್ತು ಗ್ಲಾಸಿನ ತುದಿಗೆ ಬಂದ ಚಹಾದ ಕೊನೆಯ ಹನಿ ಬಳುಕಾಡಿ ನಮ್ಮ ನಾಲಗೆಗೆ ಬೀಳಬೇಕು'. ಆಗ ಅದು ಪರಿಪೂರ್ಣತೆಯ ಅನುಭೂತಿಯನ್ನು ಓದುಗನಿಗೆ ನೀಡಬಲ್ಲದು.

ನಾಗರಾಜ ವಸ್ತಾರೆ ಕತೆಗಳಲ್ಲಿ ಸಿಗುವ ಕಲಾತ್ಮಕ ಹೆಸರುಗಳಿಗಿಂತ, ಸೂರಿ ಸಿನಿಮಾಗಳಲ್ಲಿ ಸಿಗುವ ವಿಚಿತ್ರ ಅಂಕಿತನಾಮಗಳಿಗೂ ವಿಭಿನ್ನವಾದ ಹೆಸರುಗಳನ್ನು ಶಶಿ ತಮ್ಮ ಪಾತ್ರಗಳಿಗೆ ಇಡುತ್ತಾರೆ. ಕತೆಯಲ್ಲಿನ ಪಾತ್ರಗಳಿಗೂ ಆ ಹೆಸರುಗಳಿಗೂ ನೇರಾತಿನೇರ ಸಬಂಧವಿದೆಯೆನಿಸಿ